ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು)

175 ತಹಶೀಲ್ದಾರರು.

ರಾಜ್ಯದ ಒಟ್ಟು 175 ತಾಲ್ಲೂಕು ತಹಶೀಲ್ದಾರರ ಪೈಕಿ 82 ತಹಶೀಲ್ದಾರರಿಗೆ ಸರ್ಕಾರದ ವಸತಿಗೃಹ ಒದಗಿಸಲಾಗಿದೆ. ಉಳಿದ ತಹಶೀಲ್ದಾರರುಗಳಿಗೆ ಸರ್ಕಾರಿ ವಸತಿಗೃಹವಿಲ್ಲದ ಕಡೆ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಹಂತ ಹಂತವಾಗಿ ವಸತಿ ಕಟ್ಟಡ ನಿರ್ಮಿಸಲಾಗುವುದು.

ವಿಷಯ : - ಲಂಬಾಣಿ ತಾಂಡಗಳನ್ನು ಗ್ರಾಮಪಂಚಾಯ್ತಿಗಳ ಮುಖ್ಯ ಕೇಂದ್ರವನ್ನಾಗಿ ಮಾಡಲು ಸರ್ಕಾರವು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 350(47)

ಶ್ರೀ ಮನೋಹರ ಯು. ಐನಾಪುರ್(ಬಳ್ಳೊಳ್ಳಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲಂಬಾಣಿ ತಾಂಡಗಳನ್ನು ಗ್ರಾಮಪಂಚಾಯ್ತಿಗಳ ಮುಖ್ಯ ಕೇಂದ್ರವನ್ನಾಗಿ ಮಾಡಲು ಸರ್ಕಾರದಿಂದ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಲಂಬಾಣಿ ತಾಂಡಗಳನ್ನು ಗ್ರಾಮಪಂಚಾಯ್ತಿಯ ಮುಖ್ಯ ಕೇಂದ್ರಗಳನ್ನಾಗಿ ಘೋಷಿಸಿರುವ ಸಂಖ್ಯೆ ಎಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂ.ರಾಜ್ ಸಚಿವರು)

ಅ) - ಇಲ್ಲ -

ಆ) ಕರ್ನಾಟಕ ಪಂಚಾಯ್ತಿರಾಜ್ ಅಧಿನಿಯಮ 1993ರ ಪ್ರಕರಣ 4(3)ರ ಪ್ರಕಾರ ಅಂತಿಮ ತೀರ್ಮಾನದ ನಂತರ ಈ ಬಗ್ಗೆ ಮಾಹಿತಿ ದೊರೆಯುತ್ತದೆ.

ವಿಷಯ : -ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಸುವ ರೈತರಿಗೆ ಸಹಾಯಧನ ಹಾಗೂ ಇನ್ನಿತರೆ ಆರ್ಥಿಕ ಸವಲತ್ತುಗಳನ್ನು ನೀಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 351(49)

ಶ್ರೀ ಮನೋಹರ ಯು ಐನಾಪುರ(ಬಳ್ಳೊಳ್ಳಿ) : - ಮಾನ್ಯ ತೋಟಗಾರಿಕೆ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆಯೆಂದು 1992-93ನೇ ಸಾಲಿನಲ್ಲಿ ಘೋಷಿಸಲಾಗಿದೆಯೇ?

ಆ) ತೋಟಗಾರಿಕೆ ಬೆಳೆಗಳನ್ನು ಬೆಳೆಸುವ ರೈತರಿಗೆ ಸಹಾಯಧನ ಹಾಗೂ ಇನ್ನಿತರೆ ಆರ್ಥಿಕ ಸವಲತ್ತುಗಳನ್ನು ನೀಡಲಾಗಿದೆಯೇ? (ವಿವರಗಳೊಂದಿಗೆ ನಮೂದಿಸಿ)

ಶ್ರೀ ಎ. ಕೃಷ್ಣಪ್ಪ(ತೋಟಗಾರಿಕೆ ರಾಜ್ಯ ಸಚಿವರು)

ಇಲ್ಲ.

ಹೌದು. ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗಿದೆ.